ವಿ. ಹಮೀದ್, ವಿಟ್ಲ
ಕಪ್ಪೆಗೆ ಹಕ್ಕಿಯಂತೆ ರೆಕ್ಕೆಗಳಿದ್ದದ್ದರೆ ಹೇಗಿರುತ್ತಿತ್ತು?



ಅವುಗಳಿಗೆ ಕುಪ್ಪಳಿಸುವುದೋ, ಹಾರುವುದೋ ಎಂಬ ಕಂಫ್ಯೂಷನ್ ಉಂಟಾಗುತ್ತಿತ್ತು!

ಮಾಲತಿರಾಜು, ಬೆಂಗಳೂರು
ನಮಗಿಲ್ಲ ನೆರೆಯವರೇ ಹೊರೆಯಾಗುತ್ತಿದ್ದಾರಲ್ಲಾ, ಪರಿಹಾರವೇನು?
ಕ್ಷಮಿಸಿ; ನೆರೆ ಹಾವಳಿಗೆ ಪರಿಹಾರವಿದೆ, ನೆರೆಯವರ ಹಾವಳಿಗೆ ಇಲ್ಲ!

ಮಲ್ಲಿಕಾರ್ಜುನ, ಸಾಂಗಲಿ
ನಿಮ್ಮ ದೃಷ್ಟಿಯಲ್ಲಿ ಯಕ್ಷಪ್ರಶ್ನೆ ಯಾವುದು?
ಎಷ್ಟೇ ದೃಷ್ಟಿಸಿ ನೋಡಿದರೂ ಅರ್ಥವಾಗದ ಹ್ಯಾಂಡ್‌ರೈಟಿಂಗ್‌ನಲ್ಲಿ ಬರೆದ ಪ್ರಶ್ನೆ!

ಎಂ.ಆರ್. ಪವನ್ ಕುಮಾರ್, ಬಳ್ಳಾರಿ
ಸಣ್ಣವರ ತುಂಟಾಟಕ್ಕೂ, ದೊಡ್ಡವರ ತುಂಟಾಟಕ್ಕೂ ಏನು ವ್ಯತ್ಯಾಸ?
ಸಣ್ಣವರ ತುಂಟಾಟದಿಂದ ಕಾಲಹರಣ; ದೊಡ್ಡವರ ತುಂಟಾಟದಿಂದ ಕಾಲಕಾಲಕ್ಕೂ ಹಗರಣ!

ಎಸ್.ಆರ್. ಶ್ರೇಯಸ್, ಮೈಸೂರು
ಶಾಸಕರ ಬೆಲೆಗೂ, ಮೌಲ್ಯಕ್ಕೂ ವ್ಯತ್ಯಾಸವೇನು?



ಬೆಲೆ ಕೋಟಿಗೆ ಸಮ; ಮೌಲ್ಯ ಕೋತಿಗೆ ಸಮ!

ಪಿ.ಎಸ್. ಶ್ರೀವತ್ಸ, ಬೆಂಗಳೂರು
ತೃಪ್ತಿ! ಇದರ ನಿಜವಾದ ಅರ್ಥ?
ಅತೃಪ್ತಿಯ ತಿಥಿ!

ಎಸ್. ಜಿ. ರಾಜಶೇಖರ ರೆಡ್ಡಿ, ಕಿರೇಕೊಳಂ
ನವೆಂಬರ್ ಒಂದರಂದು ಇಂಗ್ಲಿಷ್‌ನಲ್ಲಿ ಪ್ರಶ್ನೆ ಕೇಳಿದರೆ?
ಸೋ ವಾಟ್? ಐ ವಿಲ್ ರಿಪ್ಲೈ ಇನ್ ಕನಡ!

ಶ್ರೀಲಕ್ಷ್ಮಿ, ಹಳೇ ಉಪ್ಪಾರಹಳ್ಳಿ
ಹೆಂಗಸರಿಗಿಂತ ಗಂಡಸರಿಗೇ ಹೆಚ್ಚು ದುಶ್ಚಟಗಳು ಇರಲು ಕಾರಣವೇನು?
ಹೆಣ್ಣೇ! ನಿನ್ನ ಲಂಚದ ಹಣ ನನಗೆ ತುಚ್ಛವೆಂದು ಅಮ್ಮ, ಹೆಂಡತಿ ಧಿಕ್ಕರಿಸಲಿ, ಹಲವಾರು ದುಶ್ಚಟಗಳು ಹಾರಿಹೋಗುತ್ತವೆ!

ಅಶ್ವಿನಿ ವಿ. ಹೆಗಡೆ, ಭೈರುಂಬೆ
ಇಂದಿನ ರಾಜಕಾರಣದಲ್ಲಿ ಬಡವರ ಹೊಟ್ಟೆ ತುಂಬುವುದು ಯಾವಾಗ?
ಚುನಾವಣೆಯ ದಿನಗಳಲ್ಲಿ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಕುದುರೆ ರೇಸ್‌ನಲ್ಲಿ ಕುದುರೆ ಮಾತ್ರ ಓಡುತ್ತೆ; ರಾಜಕೀಯದ ರೇಸ್‌ನಲ್ಲಿ?
ಕತ್ತೆ, ಗೂಬೆ, ಕಂತ್ರಿ ನಾಯಿ, ಗೂಳಿ, ಹಾವು ಎಲ್ಲವೂ ಓಡುತ್ತವೆ!

ಸೋಮಶೇಖರ್, ಮಿರ್ಲೆ
ರಾಜ್ಯವನ್ನು ಆಳಬೇಕಾದವರು ಸಂತೆಯಲ್ಲಿ ಕುರಿಗಳಂತೆ ಹರಾಜಾಗುತ್ತಿದ್ದಾರಲ್ಲಾ...?
IPL ತತ್ವವದು! ಕ್ರಿಕೆಟ್‌ನಲ್ಲಿ ಹರಾಜಾಗುವಂತೆ ಇಂಡಿಯನ್ ಪೊಲಿಟಿಕಲ್ ಲೀಗ್‌ನಲ್ಲೂ ಹರಾಜಾದವರೇ ಮಾನ್ಯರಂತೆ!

ಎಂ.ಜಿ. ಶಿವರಾಂ, ಬೆಂಗಳೂರು
ಕನ್ನಡದ ಯಾವ ಸಾಹಿತಿಗೆ ಕರ್ನಾಟಕರತ್ನ ಪ್ರಶಸ್ತಿ ಕೊಟ್ಟರೆ ಜನ ಆಹಾ! ರತ್ನವೇ? ಎಂದು ವ್ಯಂಗ್ಯವಾಡುತ್ತಾರೆ?
ರಾಮ್‌ಗೆ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಗಂಡ ಎದ್ದಕೂಡಲೆ ನೆಲ ನೋಡಬೇಕು; ಹೆಣ್ಣು ಎದ್ದಕೂಡಲೆ ಒಲೆ ನೋಡಬೇಕು. ರಾಜಕೀಯ ನಾಯಕ?
(ಪಕ್ಷದ) ಬಲ ನೋಡಬೇಕು; (ಸೆಳೆತದ) ಬಲೆ ಬೀಸಬೇಕು.

ಎಸ್. ಲಕ್ಷ್ಮೀನಾರಾಯಣ, ಚಾಮರಾಜನಗರ
ರೆಸಾರ್ಟ್ ರಾಜಕಾರಣದಿಂದ ರಾಜ್ಯಕ್ಕೇನು ಉಪಯೋಗ?
ಹೆಚ್ಚಿನ ರೆಸಾರ್ಟ್‌ಗಳು ಖ್ಯಾತಿ ಪಡೆದು ಟೂರಿಸಂ ಇಲಾಖೆಗೆ ಲಾಭ ಬರುತ್ತದಂತೆ!

ಎನ್.ವಿ. ಶ್ರೀನಿವಾಸ್, ಮೈಸೂರು
ಕಷ್ಟಪಟ್ಟು ಕೆಲಸ ಮಾಡು ಎನ್ನುತ್ತಾರೆ; ಸುಖಪಟ್ಟು ಕೆಲಸ ಮಾಡಿದರೆ ಏನಾಗುತ್ತದೆ?
ತೂಕಡಿಕೆ ಬರುತ್ತದೆ!

## ಬಹುಮಾನಿತ ಪ್ರಶ್ನೆ

ಹೆಚ್. ಆರ್. ಕಡಿವಾಲ, ಬದಾಮಿ
ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ ಎನ್ನುವರಲ್ಲಾ, ಏಕೆ?
ಅದು ಹೊನ್ನು ಇರಬೇಕಿತ್ತು; ಬದುಕಿನ ವ್ಯಾಕರಣ ಗೊತ್ತಿಲ್ಲದವನು ಹುಣ್ಣು ಎಂದಿದ್ದಾನಷ್ಟೆ!

ಮೊಳಕಾಲ್ಮೂರು ಸುರೇಶ್, ಬಳ್ಳಾರಿ
ಪ್ಯಾರ್ ಕಿಯಾ ತೋ ಡರ್‌ನಾ ಕ್ಯಾ ಎಂದು ವಿವಾಹವಾಗಿ, ನಂತರ ಆತ್ಮಹತ್ಯೆ ಮಾಡಿಕೊಂಡ ಪ್ರೇಮಿಗಳಿಗೆ ನಿಮ್ಮ ಸಂದೇಶ?
ನೀಡಬಹುದು; ಆದರೆ ಅದು ಸ್ವರ್ಗ ಟೈಂಸ್ ನಲ್ಲಿ ಪ್ರಕಟವಾಗುತ್ತದೇನು?

ಭಾರತಿ ಮಾನಗೆ, ಹೊನ್ನಾವರ
ಪ್ರೀತಿಯನ್ನು ಮುಳ್ಳಿದ್ದ ಗುಲಾಬಿಗೆ ಹೋಲಿಸುವುದೇಕೆ?



ಸುಂದರ ಗುಲಾಬಿಯಂತಹ ಜೀವನಕ್ಕೆ ಮುಳ್ಳಿನಂತಹ ಭದ್ರ ರಕ್ಷಣೆ ಸೂಚಿಸಲು!

ಗೌರಿ ಶೇಷಾದ್ರಿ, ಉತ್ತನಹಳ್ಳಿ
ಎಲ್ಲಾ ಸಮಸ್ಯೆಗಳಿಗೆ ಮನೆಯ ವಾಸ್ತು ಸರಿಯಿಲ್ಲವೆಂದು ದೂಷಿಸುವುದು ಸರಿಯೇ?
ಸರಿಯಲ್ಲ; ಆದರೆ ಬೇರೆ ಯಾವುದನ್ನು ದೂಷಿಸುವುದು ಎಂಬುದೇ ದೊಡ್ಡ ಸಮಸ್ಯೆಯಂತೆ!

ಕುಮಾರ ಚಲವಾದಿ, ಹೊಳೆನರಸಿಪುರ
ಭಾಷಣ ಮಾಡುವವರೆಲ್ಲಾ ಜೀವನದಲ್ಲಿ ತತ್ವ, ಆದರ್ಶಗಳನ್ನು ಪಾಲಿಸುತ್ತಾರೆಯೇ?
ಹುಚ್ಚಪ್ಪ! ಪಾಲಿಸಿದ್ದದ್ದರೆ ಭಾಷಣ ಏಕೆ ಬೇಕಿತ್ತು; ಅವರ ಜೀವನವೇ ಒಂದು ಆದರ್ಶ ಭಾಷ್ಯವಾಗುತ್ತಿತ್ತು.

ಎನ್. ವಸಂತಾ ಆನಂದ್, ಬೆಂಗಳೂರು
ತನ್ನ ಸುತ್ತಾ ತಾನೇ ತಿರುಗುವ ಭೂಮಿಗೂ, ಅಧಿಕಾರದ ಸುತ್ತಾ ತಿರುಗುವ ಸಚಿವರಿಗೂ ಏನು ವ್ಯತ್ಯಾಸ?
ಸಚಿವನಿಗೆ ಅಧಿಕಾರ ಸಿಕ್ಕಾಕ್ಷಣ ತಿರುಗಾಟ ಬಂದ್. ಬಡಪಾಯಿ ಭೂಮಿಗೆ ತಿರುಗಾಟ ನಿಲ್ಲಿಸುವ ಅಧಿಕಾರವೇ ಇಲ್ಲ!

■ ರಾಮ್